Sri A. P. APPANNA.—I have information only with respect to this firm. With respcet to sales, and concession given to other firms I have no information.

Mr. SPEAKER.—I shall hold over the question.

Visit of Chief Minister to Japan and other Countries

31. Sri H. N. NANJE GOWDA (Arkalgud).—

Will the Chief Minister be pleased to state :—

(*a*) the total expenditure incurred by the Government for the tour undertaken by the Chief Minister to Japan recently;

(*b*) the persons that accompanied him during the tour ; the total expenditure incurred by Government on them ;

(*c*) the purpose of this tour : whether the purpose has been achieved by the Chief Minister ;

(*d*) whether the Chief Minister had talks, with industrialists and other Government personnel, in the countries visited by him and the subject matter of the talks ;

(*e*) whether the Chief Minister had special talks regarding opening of a small car factory and the possibilities of Mysore exporting iron ore and ingots to Japan ; if so, the outcome of his talks with them ;

(*f*) whether the Chief Minister had obtained the consent of Government of India before he proceeded on tour to deal in these matters with other countries ?

Sri VEERENDRA PATIL (Chief Minister).—

(*a*) Detailed information is yet to be collected from the Indian Embassies abroad. The Accountant General has been asked to obtain this information. Rs. 10,580 was drawn by the Chief Minister as an advance.

(*b*) Sri T. Shamanna, Chairman, Mysore State Industrial Investment and Development Corporation and REMCO, was the only person who accompanied the Chief Minister.

No expenditure was incurred from Government account on him.

(*c*) Official. Yes.

(*d*) Yes. Formal discussions.

(*e*) No talks were held by the Chief Minister about the Small Car Project. Detailed discussions were held about the export of iron ore to Japan.

The talks were encouraging.

(*f*) Consent of the Government of India to discuss such matters with other countries is not necessary.

ಶ್ರೀ ಹೆಚ್. ಎನ್. ನಂಜೇಗೌಡ.—ತಾವು ಪ್ರವಾಸಕ್ಕೋಗಿದ್ದ ಉದ್ದೇಶವೇನು ಮತ್ತು ನಿಮ್ಮ ಉದ್ದೇಶವನ್ನು ಮುಖ್ಯಮಂತ್ರಿಗಳು ಸಾಧಿಸಿರುವರೇ ಎಂದು ಕೇಳಿದ್ದಕ್ಕೆ ಅಧಿಕೃತ ಉದ್ದೇಶ ಮತ್ತು ಸಾಧನೆ ಆಗಿದೆ ಎಂದು ಉತ್ತರ ಹೇಳಿದ್ದಾರೆ. ಸ್ನೇಹಕ್ಕೋಸ್ಕರ ಪ್ರವಾಸಹೋಗಿದ್ದರೋ ಅಥವಾ ಕೈಗಾರಿಕೋದ್ಯಮಿಗಳೊಡನೆ ಮಾತನಾಡುವುದಕ್ಕೆ ಹೋಗಿದ್ದರೋ ಆದರ ವಿವರಗಳನ್ನು ತಿಳಿಸುವರೇ ?

†ಶ್ರೀ ವೀರೇಂದ್ರ ಪಾಟೀರ್.—ನಾನು ಅನೇಕ ವಿಚಾರಗಳನ್ನು ಇಟ್ಟುಕೊಂಡು ಹೋಗಿದ್ದೆ. ಇಲ್ಲಿ ಅನೇಕ ಫರ್ಮಗಳ ಜೊತೆ ನಮ್ಮದು ಈಗಾಗಲೇ ಕೊಲೇಬರೇಷನ್ ಇದೆ. ಬಹುಶಃ ನಮ್ಮ ಮೈಸೂರು ಸ್ಟೇಟಿನಲ್ಲಿ ಜಪಾನೀಸ್ ಕೊಲೇಬರೇಷನ್ ಎಷ್ಟು ಇದೆಯೋ ಅಷ್ಟು ಪ್ರಮಾಣದಲ್ಲಿ ಎರಡನೇ ಕಡೆ ಇರಲಿಕ್ಕೆ ಇಲ್ಲ ಎಂದು ಅನ್ನಿಸುತ್ತದೆ. ಈಗಾಗಲೆ ನಮ್ಮಲ್ಲಿ ಎನ್. ಜಿ. ಕೆ. ತೋಷಿಬಾ ಕೊಲೇಬರೇಷನ್ ಇದೆ. ಅದೇ ರೀತಿ ಮಿಟನೂಬ ಕೊಲೇಬರೇಷನ್ ಇದೆ. ಇದಲ್ಲದೆ ಇನ್ನೂ ಅನೇಕ ಕೊಲೇಬರೇಷನ್ ಇದೆ. ನಾನು ಅಲ್ಲಿ ಪ್ರಿಲಿಮಿನರಿ ಡಿಸ್‌ಕಷನ್ ಮಾಡಬೇಕೆಂದು ಹೋಗಿದ್ದು. ಯಾತಕೆಂದರೆ, ಗವರ್ನಮೆಂಟ್ ಆಫ್ ಇಂಡಿಯಾದವರು ಕೆಲವು ಪ್ರಾಜೆಕ್ಟ್ ಬಗ್ಗೆ ನಮಗೆ ಲೆಟರ್ ಆಫ್ ಇಂಟೆಂಟ್ ಕೊಟ್ಟಿದ್ದಾರೆ. ಇನ್ನು ಕೆಲವು ಪ್ರಾಜೆಕ್ಟ್ ಬಗ್ಗೆ ಅಪ್ರೂವಲ್ ಇನ್ ಪ್ರಿನ್ಸಿಪಲ್ ಕೊಟ್ಟಿದ್ದಾರೆ. ಅದನ್ನು ನೆಗೋಷಿಯೇಟ್ ಮಾಡುವ ನಿಲುವಾಗಿ ಹೋಗಿದ್ದೆ. ಮಾನ್ಯ ಸದಸ್ಯರು ಯಾರು ಯಾರ ಕೂಡ ನೆಗೋಷಿಯೇಟ್ ಮಾಡಿದ್ದೇನೆ ಎಂದು ವಿವರಗಳನ್ನು ಕೇಳಿದ್ದಾರೆ. ಅದನ್ನು ಕೊಡಬೇಕಾದರೆ, ಒಂದು ದೊಡ್ಡ ಪಟ್ಟಿಯನ್ನೇ ಓದಬೇಕಾಗುತ್ತದೆ. ಐರನ್ ಓರ್ ಎಕ್ಸ್‌ಪೋರ್ಟ್ ಮಾಡುತ್ತಾ ಇದ್ದೇವೆ. ಅದು ಬಿಟ್ಟು ಪಿಗ್ ಐರನ್ ಓರ್ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಏನು ಪಾಸಿಬಲಿಟೀಸ್ ಇದೆ ಎಂದು ತಿಳಿದುಕೊಳ್ಳಲು ಹೋಗಿದ್ದೆ. ಡಾ. ನಾಗಿನೋ ಸ್ಟೀರ್ ಕಾರ್ಪೊರೇಷನ್ ಎಂದು ಇಡೀ ಜಪಾನಿಗೆ ಒಂದು ಸ್ಟೀರ್ ಕಾರ್ಪೊರೇಷನ್ ಮಾಡಿಕೊಂಡಿದ್ದಾರೆ. ಮೊದಲು ಬೇರೆ ಬೇರೆ ಸ್ಟೀಲು ಕಂಪನಿಗಳು ಇದ್ದವು. ಅವೆಲ್ಲವನ್ನೂ ಅಮಾಲ್ಗಮೇಟ್ ಮಾಡಿ ಈಗ ಒಂದು ಸ್ಟೀರ್ ಕಾರ್ಪೊರೇಷನ್ ಮಾಡಿಕೊಂಡಿದ್ದಾರೆ. ಅವರ ಜೊತೆಗೆ ಪಾಸಿಬಿಲಿಟೀಸ್ ಡಿಸ್ಕಸ್ ಮಾಡುವುದಕ್ಕೆ ಹೋಗಿದ್ದೆ. ಅದೇ ರೀತಿಯಿಂದ ಬಳ್ಳಾರಿ ಹೊಸಪೇಟೆ ಐರನ್ ಓರ್ ಮೈನ್ಸ್ ಡೆವಲಪ್ ಮಾಡಬೇಕೆಂದಿದ್ದೇವೆ. ಕಾರವಾರ ಪೋರ್ಟ್ ಡೆವಲಪ ಮಾಡುವುದಕ್ಕೆ ಕೂಡ ಕೆಲವು ಫರ್ಮಗಳ ಜೊತೆಗೆ ಟೆರ್ಮ್ ಮಾಡಿದೆ. ರೆಮ್ಕೋ ಜೊತೆಗೆ ತೋಷಿಫಾ ಕೊಲೆಬರೇಷನ್ ಈಗಾಗಲೇ ಇದೆ. ಅದರ ಅವಧಿ ಮುಗಿದು ಹೋಗುತ್ತಾ ಇದೆ. ಅದನ್ನು ಎಕ್ಸ್‌ಟೆಂಡ್ ಮಾಡುವ ವಿಚಾರ ಇತ್ತು ಅದರ ಬಗ್ಗೆ ಚರ್ಚೆ ಮಾಡಿದ್ದೇನೆ. ಅವರ ಕೂಡ ರೆಮ್ಕೋ ಕರೆತು ಜಾಯಿಂಟ್ ವೆಂಚರ್ ಮಾಡಿ, ಎಲೆಕ್ಟ್ರಾನಿಕ್ ಇಂಡಿಸ್ಟ್ರೀಸ್ ಬೆಳಸಲು ಎಷ್ಟರಮಟ್ಟಿಗೆ ಸಾಧ್ಯವಿದೆ, ಅವರು ನಮ್ಮ ಜೊತೆಯಲ್ಲಿ ಸೇರಲು ಫಷ್ಟರ ಮಟ್ಟಿಗೆ ತಯಾರು ಇದ್ದಾರೆ ಎಂದು ತಿಳಿದುಕೊಳ್ಳಲು ಅವರ ಜೊತೆಯಲ್ಲಿ ವಿಚಾರ ಮಾಡಿದ್ದೇನೆ. ಅಲ್ಲಿಂದ ನಮಗೆ ಕೇಂದ್ರ ಸರ್ಕಾರದವರು ಬೆರಿಲಿಯಂ ಆಕ್ಸೈಡ್ ಪ್ರಾಜೆಕ್ಟಿಗೆ ಅಪ್ರೂವರ್ ಇನ್ ಪ್ರಿನ್ಸಿಪರ್ ಕೊಟ್ಟಿದ್ದಾರೆ. ಎನ್.ಜಿ.ಕೆ. ಜೊತೆಯಲ್ಲಿ ಈ ವಿಚಾರ ಮಾತನಾಡಿಕೊಂಡು ಬಂದಿದ್ದೇನೆ. ಅದೇ ರೀತಿ ಸುಮಿತೋ ಕಮ್ಯುನಿಕೇಷನ್ ಕೇಬಲ್ಸ್ ಅವರು ರೆಮ್ಕೋ ಜೊತಗೆ ಕೊಲೇಬರೇಷನ್ ಮಾಡಲು ಮುಂದೆ ಬರುವುದಕ್ಕೆ ತಯಾರು ಇದ್ದಾರೆ. ಅದನ್ನೂ ಕೂಡ ಮಾತನಾಡಿಕೊಂಡು ಬಂದಿದ್ದೇನೆ. ಅಲ್ಲಿಂದ ನಮ್ಮಲ್ಲಿ ಚಿತ್ರದುರ್ಗದಲ್ಲಿ ಕಾಪರ್ ಸಾಕಷ್ಟು ಇದೆ. ಇದೇ ಸುಮಿತೋರವರು ಇದರಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ. ಇವರು ಫಿಜಿಬಿಲಿಟಿ ಸ್ಟಡೀ ಮಾಡಿ ಅದಕ್ಕೆ ಒಂದು ಫೀಜಿಬಿಲಿಟಿ ರಿಪೋರ್ಟು ಕೊಡಲು ತಯಾರು ಇದ್ದಾರೆಯೇ ಎಂದು ಅವರ ಬಗ್ಗೆ ಚರ್ಚೆ ಮಾಡಿಕೊಂಡು ಬಂದಿದ್ದೇನೆ.

ಅಲ್ಲಿಂದ ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಈಗಾಗಲೇ ಕೇಂದ್ರ ಸರ್ಕಾರದವರು ನಿಯೋಹೈಡ್ರೇಟ್ ಯೂನಿಟ್ ನಿಲುವಾಗಿ ಲೆಟರ್ ಆಫ್ ಇಂಟೆಂಟ್ ಕೊಟ್ಟಿದ್ದಾರೆ. ಇದರ ಬಗ್ಗೆ ಮುರು ಬಿನೋ ಇದಾ ಇವರ ಜೊತೆಯಲ್ಲಿ ನೋಹೌ, ಪ್ಲಾಂಟ್, ಎಕ್ವಿಪ್‌ಮೆಂಟ್, ಎಕ್ಸ್‌ಪರ್ಟ್ಸ್ ಅಡ್‌ವೈಸ್ ಕೊಡುವುದಕ್ಕೆ ಮಾತನಾಡಿಕೊಂಡು ಬಂದಿದ್ದೇನೆ.

ಸ್ಟಾರ್ ಸ್ಟೀರ್ ಇಂಡಸ್ಟ್ರೀಸ್ ಬಗ್ಗೆ ಕೂಡ ಕೆಲವರ ಜೊತೆಯಲ್ಲಿ ಮಾತನಾಡಿಕೊಂಡು ಬಂದಿದ್ದೇನೆ. ನಮ್ಮಲ್ಲಿನ ಟಿಂಬರ್, ಅಂದರೆ ರೋಸ್ ವುಡ್‌ಗೆ ಬಹಳಷ್ಟು ಡಿಮ್ಯಾಂಡ್ ಇದೆ. ಇದರ ಬಗ್ಗೆ ಎಷ್ಟರಮಟ್ಟಿಗೆ ಹೊರಗಡೆ ಸಾಗಿಸಬಹುದು, ಜಪಾನಿನವರು ಅದನ್ನು ತೆಗೆದು

(ಶ್ರೀ ವೀರೇಂದ್ರ ಪಾಟೀಲ್)

ಕೊಳ್ಳುವುದಕ್ಕೆ ತಯಾರು ಇದ್ದಾರೆಯೇ ಎಂದು ಅವರ ಜೊತೆಯಲ್ಲಿ ಮಾತನಾಡಿಕೊಂಡು ಬಂದಿದ್ದೇನೆ. ಮತ್ತು ಇದೇ ಸಂದರ್ಭದಲ್ಲಿ ಜಪಾನಿನಲ್ಲಿ ಸಿಸ್ಟೇಕಾ ಪ್ರಿಫೆಕ್ಚರ್ ಎಂದು ಇದೆ. They have adopted Bangalore City as the sister city of Sumidu ಅವರು ನಮಗೆ ಒಂದು ಬೇಬಿ ಎಲಿಫೆಂಟ್ ಬೇಕು ಎಂದು ಬರೆದಿದ್ದರು. ಅಲ್ಲಿನ ಮಕ್ಕಳಿಗೆ ಒಂದು ಬೇಬಿ ಎಲಿಫೆಂಟನ್ನು ನಾವು ಕೊಡುತ್ತೇವೆ ಎಂದು ಬರೆದಿದ್ದೆವು. ನೀವೇ ಬಂದು ಪ್ರೆಸೆಂಟ್ ಮಾಡಬೇಕೆಂದು ಕೆಲವು ದಿವಸಗಳ ಹಿಂದೆ ನನಗೆ ಇನ್ವಿಟೇಷನ್ ಬಂದಿತು. ಅದಕ್ಕೂ ಕೂಡ ಈ ಸಂದರ್ಭದಲ್ಲಿ ಹೋಗಿ on behalf of the children of Mysore State I presented that baby elephant to the children of Sumidu.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಮುಖ್ಯ ಮಂತ್ರಿಗಳು ಈಗ ಕೊಟ್ಟಿರತಕ್ಕ ಉತ್ತರದಲ್ಲಿ ಕೆಲವು ತತ್ವಗಳು ಅಡಕವಾಗಿವೆ. ನಾವು ಇಂತಿಂಥ ಕಂಪನಿಗಳಿಗೆ ಮತ್ತು ಇಂತಿಂಥ ಇಂಡಿವಿಷ್ಯುಯಲ್ ಫರ್ಮ್‌ಗಳಿಗೆ ಹೋಗಿ ಇಂತಿಂಥ ವಿಚಾರಗಳಲ್ಲಿ ಮಾತನಾಡಿ ಬಂದಿದ್ದೇವೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳಾಗಿ ಪರದೇಶಗಳಿಗೆ ಹೋಗಿ ಬೇರೆಬೇರೆ ಕಂಪನಿಗಳಲ್ಲಿ ಮಾತನಾಡುವುದು ರೂಢಿಯಲ್ಲಿ ಇದೆಯೇ? ಈ ತರಹ ಕಂಪನಿಗಳಿಗೆ ಹೋಗಿ ಕೆಲವು ಕೈಗಾರಿಕೆಗಳ ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಬಗ್ಗೆ ಮಾತನಾಡಬೇಕಾದರೆ ಇವರು ಮಾನ್ಯ ಮುಖ್ಯಮಂತ್ರಿಯಾಗಿ ಹೋಗಿದ್ದಾರೆಯೋ ಅಥವಾ ಇರಾಜೆಯ ಮುಖ್ಯಾಧಿಕಾರಿಗಳಾಗಿ ಹೋಗಿದ್ದಾರೆಯೋ? ನಾವು ತಿಳಿದಮಟ್ಟಿಗೆ ಇರಾಜಾಧಿಕಾರಿಗಳು ಅಲ್ಲಿಗೆ ಹೋಗಿ ಮಾತನಾಡುವುದು ಪದ್ಧತಿ. ನಂತರ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಅದರ ಬಗ್ಗೆ ಅಖೈರು ತೀರ್ಮಾನ ತೆಗೆದುಕೊಳ್ಳುವುದರಲ್ಲಿ ನಮಗೆ ಅರ್ಥವಾಗುತ್ತದೆ. ಇಂಡಸ್ಟ್ರೀಸ್ ಇರಾಜೆಯು ಡೈರೆಕ್ಟರಾಗಿ ಅಥವಾ ಇರಾಜೆಯ ಮುಖ್ಯಾಧಿಕಾರಿಯಾಗಿ ಅಲ್ಲಿಗೆ ಹೋಗಿ ಮಾತನಾಡುವ ಸ್ಥಂಧರ್ಭ ಹೇಗಿದೆಯೋ ಹಾಗೆ ಇಲ್ಲ ಅವರು ಹೇಳುತ್ತಿದ್ದಾರೆ. ಇದು ಒಂದು ವಿಚಾರ. ಇನ್ನೊಂದು ವಿಚಾರ. ಮುಖ್ಯ ಮಂತ್ರಿಗಳು ಈ ರೀತಿಯಾಗಿ ಅಲ್ಲಿಗೆ ಹೋಗಿ ಅಲ್ಲಿನ ಕಂಪೆನಿಗಳಲ್ಲಿರುವ ವ್ಯಕ್ತಿಗಳ ಜೊತೆಯಲ್ಲಿ ಮಾತನಾಡುವುದು ಒಂದು ಕನ್‌ವೆನ್‌ಷನ್ ಇದೆಯೇ? ಮೂರನೆಯ ವಿಚಾರ, ಇವರು ಜಪಾನಿಗೆ ಹೋಗಿ ಬಂದಮೇಲೆ ಈ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆಯೇ? ಅಥವಾ ಕೇಂದ್ರಸರ್ಕಾರಕ್ಕೆ ಏನಾದರೂ ಒಂದು ವರದಿಯನ್ನು ಕೊಟ್ಟಿದ್ದಾರೆಯೇ? ಹಾಗೇನಾದರೂ ಒಂದು ವರದಿಯನ್ನು ಕೊಟ್ಟಿದ್ದರೆ, ಆ ವರದಿಯ ಕಾಪಿಯನ್ನು ನಮಗೆ ಕೊಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮುಖ್ಯಮಂತ್ರಿಯಾಗಿ ನಾನೊಬ್ಬನೇ ಹೊರಗೆ ಹೋಗಿದ್ದೇನೆಂದಲ್ಲ. ಮಂತ್ರಿಗಳೂ ಅನೇಕಸಾರಿ ವಿದೇಶ ಪ್ರವಾಸ ಮಾಡಿದ್ದಾರೆ. ಮಾನ್ಯ ಸದಸ್ಯರೂ ಸಹ ಮಂತ್ರಿಯಾಗಿದ್ದಾಗ ವಿದೇಶ ಪ್ರವಾಸವನ್ನು ಮಾಡಿದ್ದಾರೆ. ವಿದೇಶ ಪ್ರವಾಸ ಮಾಡುವುದಕ್ಕೆ ಮುಖ್ಯಮಂತ್ರಿಗಳು ಹೋಗಬೇಕಾದಾಗ ಆ ವಿಚಾರವನ್ನು ಮುಖ್ಯಮಂತ್ರಿಯಾಗಿ ಕೇಂದ್ರ ಸರ್ಕಾರಕ್ಕೆ ಬರೆದು, ಕೇಂದ್ರಸರ್ಕಾರದ ಅನುಮತಿಯನ್ನು ಪಡೆದು, ಫಾರಿನ್ ಎಕ್ಸ್‌ಚೇಂಜ್ ಮತ್ತು ಇತರ ಫಾರ್ಮಾಲಿಟೀಸ್‌ಗಳನ್ನೆಲ್ಲಾ ಕಂಪ್ಲೀಟ್ ಮಾಡಿ ಮುಖ್ಯಮಂತ್ರಿಯಾಗಿ ಹೊರಗೆ ಹೋಗಿದ್ದೇನೆ. ಮುಖ್ಯಮಂತ್ರಿಯಾಗಿಯೇ ಅಲ್ಲಿ ಚರ್ಚೆ ಮಾಡಿದ್ದೇನೆ. ಸಂಬಂಧಪಟ್ಟ ಫರ್ಮ್‌ಗಳ ಚೇರಮನ್ ಮತ್ತು ಅಧಿಕಾರಿಗಳ ಜೊತೆಯಲ್ಲಿ ಚರ್ಚೆಮಾಡಿದ್ದೇನೆ. ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿಯೂ ಚರ್ಚೆಮಾಡಿದ್ದೇನೆ. ಆ ರೀತಿ ಚರ್ಚೆಮಾಡಿದ್ದಾಗ ಅಂಬಾಸಡರ್ ಅವರು ಜೊತೆಯಲ್ಲಿದ್ದರು. ಅವರಲ್ಲಿಯೂ ಚರ್ಚೆಮಾಡಿದ್ದೇನೆ. ಮಾನ್ಯ ಸದಸ್ಯರು ಕೇಳುವಂಥಾದ್ದು ಪರದೇಶದ ಫರ್ಮ್‌ಗಳ ಜೊತೆಯಲ್ಲಿ, ಅಲ್ಲಿನ ಸರ್ಕಾರದ ಜೊತೆಯಲ್ಲಿ ಚರ್ಚೆಮಾಡುವುದು, ವ್ಯವಹಾರ ಮಾಡುವುದು ನನಗೆ ಸರಿಯೇ ಎಂದು ಇದೆಲ್ಲಾ ಪ್ರೀಲಿಮಿನರಿ ಡಿಸ್‌ಕಷನ್ಸ್. ಇದು ಆಗಬೇಕು. ಫೈನರ್ ಸ್ಟೇಜಿಗೆ ಬಂದಾಗ ಒಂದು ಫೈನರ್ ಡಿಸಿಷನ್ ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ನಾನೇ ಅಲ್ಲ, ಅನೇಕ ಮುಖ್ಯಮಂತ್ರಿಗಳೂ ಸಹ ಇದೇ ರೀತಿ ಹೊರಗೆ ಹೋದಾಗ ಕೆಲವು ಪ್ರಾಜೆಕ್ಟ್‌ಗಳನ್ನು ಫೈನಲೈಜ್ ಮಾಡಿದ್ದಾರೆ. ಕೇಂದ್ರಸರ್ಕಾರದ ಅಪ್ರೂವರ್ ತೆಗೆದುಕೊಂಡು ಮುಂದೆ ಹೆಜ್ಜೆ ಇಟ್ಟಿದ್ದೇನೆ. ನಾನು ಈಗ ಮುಖ್ಯಮಂತ್ರಿಯಾಗಿರುವುದರಿಂದ ನಾನೇ ಅದರ ಬಗ್ಗೆ ಒಂದು ವರದಿಯನ್ನು ಕೊಡುವ ಅವಶ್ಯಕತೆ ಇಲ್ಲ. ನನ್ನ ಜೊತೆಯಲ್ಲಿ ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಚೇರಮನ್ ಬಂದಿದ್ದರು. ಅವರೂ ನಾವೂ ಅಲ್ಲಿ ಏನೇನು ಮಾಡಿದ್ದೇವೆಯೋ ಅವರ ಬಗ್ಗೆ ಅವರು ಈಗ ಒಂದು ಬ್ರೀಫ್ ನೋಟನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಯಾವರೀತಿ ವ್ಯಾವ್ಯಾವ ವಿಷಯದಲ್ಲಿ ಶತ್ರ್ಯವ್ಯವಹಾರ ಮಾಡಬೇಕೋ ಅದನ್ನು ಮಾಡ್ತುತ್ತೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಪರದೇಶಗಳಿಗೆ ಸರ್ಕಾರದ ಪರವಾಗಿ ಸರ್ಕಾರದ ಕೆಲಸ ಸಾಧನೆಗೋಸ್ಕರವಾಗಿ ಹೋಗಬೇಕಾದ ಬಗ್ಗೆ ಏನಾದರೂ ನೀತಿನಿಯಮಗಳನ್ನು ಇಟ್ಟುಕೊಂಡಿದ್ದಾರೆಯೇ ? ಅದಕ್ಕೇನಾದರೂ ಒಂದು ಸಂಪ್ರದಾಯ ಏದೆಯೇ ? ಎರಡನೆಯದು ಪತ್ರ ವ್ಯವಹಾರಗಳ ಮೂಲಕ ವಿದೇಶಿ ಬಂಡವಾಳಷಾಹಿಗಳ ಮತ್ತು ಉದ್ದಿಮೆಗಾರರಲ್ಲಿ ವ್ಯವಹಾರ ನಡೆಸಿ, ಸರಿಯಾಗಿ ಅಲ್ಲಿ ವ್ಯವಹಾರ ಆಗದೇ ಇರುವ ವಿಷಯಗಳು ಇದ್ದರೆ, ಆಗ ಇಲ್ಲಿನ ಅಧಿಕಾರಿಗಳನ್ನು ಕಳುಹಿಸಿ ಪರ್ಸನಲ್ಲಾಗಿ ಚರ್ಚೆಮಾಡುವುದು ಒಂದು ಸಂಪ್ರದಾಯವೆಂದು ನಾನು ತಿಳಿದುಕೊಂಡಿದ್ದೇನೆ. ಅಂದಮೇಲೆ ಮುಖ್ಯಮಂತ್ರಿಗಳು ಪರದೇಶಗಳ ಬಂಡವಾಳಷಾಹಿಗಳ ಜೊತೆಯೊಳಗೆ ಅದರಲ್ಲಿಯೂ ಇವರ ಮೇಲೆ ಭೂತಾಕಾರವಾದ ಲಂಚದ ಆಪಾದನೆಗಳು ಇರುವಾಗ, ಚರ್ಚೆ ಮಾಡುವುದು ಸರ್ಕಾರದ ನೀತಿಯೇ ?

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರದ ನೀತಿಯೇನೆಂಬುದು ಬಹಳ ಸ್ಪಷ್ಟವಿದೆ. ಅದ್ದರಿಂದ ಅದರ ಬಗ್ಗೆ ಮಾನ್ಯ ಸದಸ್ಯರಿಗೆ ವಿವರಗಳನ್ನು ಕೊಡಬೇಕಾದ ಅವಶ್ಯಕತೆ ಇಲ್ಲ. ಇದು ಯಾವ ಬಂಡವಾಳಷಾಹಿಗಳ ಜೊತೆಯಲ್ಲಿ ವಾತನಾಡುವ ಪ್ರಶ್ನೆಯಲ್ಲ. ಫಾರನ್ ಕೊರಾ್ಯಬೊರೇಷನ್ ಅನೇಕಸಾರಿ ತೆಗೆದುಕೊಳ್ಳಬೇಕಾಗಿದೆ. ಇಂಡಿಜನಸ್ ನೋಹೌ ಎಲ್ಲಿ ತೆಗೆದುಕೊಳ್ಳಬೇಕಾಗುತ್ತದೋ ಅಲ್ಲಿ ಚರ್ಚೆಮಾಡುವ ಅವಶ್ಯಕತೆ ಇದೆ.- ಮುಖ್ಯಮಂತ್ರಿಗಳು ಪರದೇಶಗಳಿಗೆ ಹೋಗಬೇಕೆಂದು ಹೇಳಿದಾಗ, ಸಂಪ್ರದಾಯದ ರೀತಿ ಅವರು ಕೇಂದ್ರಸರ್ಕಾರಕ್ಕೆ ಬರೆದು ಕೇಂದ್ರಸರ್ಕಾರದ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಅಲ್ಲಗೆ ಹೋಗುವುದಕ್ಕೆ ನನಗೆ ಇನ್‌ವಿಟೇಷನ್ ಬಂದಿತ್ತು. ಅಲ್ಲಗೆ ಹೋಗಿ ನಾವು ಎರ್ಲಾ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—(ಅ) ಗೆ ಉತ್ತರವಾಗಿ ಶ್ರೀ ಟಿ. ಶಾಮಣ್ಣನವರು ಮುಖ್ಯಮಂತ್ರಿಗಳೊಡನೆ ಪ್ರಯಾಣ ಕೈಗೊಂಡಿದ್ದರೆಂದು ಹೇಳಿದ್ದೀರಿ. ಆದರೆ ಅವರ ಬಗ್ಗೆ ಸರ್ಕಾರದ ಖರ್ಚು ಏನೆಂದು ಹೇಳಲಿಲ್ಲ. ಮಾನ್ಯ ಶ್ರೀ ಶಾಮಣ್ಣನವರನ್ನು ಏತಕ್ಕೆ ಕರೆದುಕೊಂಡು ಹೋಗಿದ್ದಿರಿ? ಅವರಿಗೆ ಹೆಚ್ಚು ಅನುಭವ ಇದೆಯೆಂಬ ಆಧಾರದ ಮೇಲೊ ಅಥವಾ ಬೇರೆಯಾವ ಒಂದು ಆಧಾರದ ಮೇಲೆ ಕರೆದುಕೊಂಡು ಹೋಗಿದ್ದಿರಿ ? ಅವರಿಗಾಗಿ ಆದಂಥ ಖರ್ಚನ್ನು ಅವರು ತಮ್ಮ ಕೈಯ್ಯಿಂದ ಕೊಟ್ಟಿದ್ದಾರೆಯೇ ಆಥವಾ ಮೈಸೂರು ರಾಜ್ಯದ ವಾಣಿಜ್ಯೋದ್ಯಮ ಬಂಡವಾಳ ಹಾಗೂ ಅಭಿವೃದ್ಧಿ ಸಂಸ್ಥೆ ಮತ್ತು ರೆಂಕೊಗಳವ್ವರು ಕೊಟಿದ್ದಾರೋ ? ಯಾರು ಅವರ ಖರ್ಚಿಗೆ ಹಣ ಕೊಟ್ಟಿದ್ದಾರೆ ?

ಶ್ರೀ ವೀರೇಂದ್ರ ಪಾಟೀರ್.—ಕೆಲವು ಪ್ರಾಜೆಕ್ಟ್‌ಗಳನ್ನು ಚರ್ಚೆಮಾಡುವುದಕ್ಕೆ ಅಲ್ಲಗೆ ಹೋಗಿದ್ದೆವು. ಮಾನ್ಯ ಶ್ರೀ ಟಿ. ಶಾಮಣ್ಣನವರು ಮೈಸೂರು ರಾಜ್ಯದ ವಾಣಿಜ್ಯೋದ್ಯಮ ಬಂಡವಾಳ ಹಾಗೂ ಅಭಿವೃದ್ಧಿ ಸಂಸ್ಥೆ ಮತ್ತು ರೆಂಕೊಗಳ ಅಧ್ಯಕ್ಷರು ಆಗಿದ್ದಾರೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಮಾಡುವುದಕೊಸ್ಕರ ಈ ಕಾರ್ಪೊರೇಷನ್ನನ್ನು ಮಾಡಿದ್ದೇವೆ ಈ ಕಾರ್ಪೊರೇಷನ್ನಿಗೆ ಕೇಂದ್ರಸರ್ಕಾರದವರು ಕೆಲವು ಲೆಟರ್ ಆಫ್ ಇಂಟೆಂಟ್ ಮತ್ತು ಅಪ್ರೂವರ್ ಇನ್ ಪ್ರಿನ್ಸಿಪರ್ ಕೊಟ್ಟಿದ್ದಾರೆ. ಅವರು ನನ್ನ ಜೊತೆಯಲ್ಲ ಬಂದುದು ಕಾರ್ಪೊರೇಷನ್ ಚೇರಮನ್‌ರಾಗಿ ಅಲ್ಲದೆ, ರೆಂಕೊ ಪರವಾಗಿಯೂ ಮತ್ತು ಮೈಸೂರು ಪ್ರೇಸ್‌ರೆನ್ ಪರವಾಗಿಯೂ ಬಂದಿದ್ದರು. ಎರಡು ಪ್ರಾಜೆಕ್ಟ್‌ಗಳ ಬಗ್ಗೆ ಚರ್ಚೆಮಾಡುವ ಅವಶ್ಯಕತೆಯೂ ಇದ್ದುದರಿಂದ ಅವರು ಬಂದಿದ್ದರು. ಅವರ ಬಗ್ಗೆ ಸರ್ಕಾರ ಖರ್ಚು ಮಾಡಿಲ್ಲ ಫರ್ಮ್‌ನಿಂದ ಸ್ವಲ್ಪ ಖರ್ಚಾಗಿದೆ.

Sri H. SIDDAVEERAPPA.—Sir, the Chief Minister said that he had received invitations. I would like to know which are the firms that invited him and for what purpose was he invited ? He also mentioned that Dr. Naguno is the top-most man in Japan so far as steel industry is concerned. May I know whether he gave an interview personally to the Chief Minister, whether he was able to see him or whether he had an interview with his subordinate officers ?

Sri VEERENDRA PATIL.—I am very happy to say that I was with Dr. Naguno for about two hours. I was not only with him, but also with all top-officers I had a detailed discussion. I am happy to say that so far they were not in a position to import pig iron and now they have agreed to take pig iron after my detailed discussion

(SRI VEERENDRA PATIL)

with them. So far as the invitation is concerned, I had an invitation from the Mayor Mr. Prefecto Chizoka for the presentation of baby elephant to the children of Sumidu, and I took that opportunity also.

ಶ್ರೀ ವಾಟಾಳ್ ನಾಗರಾಜ್.—ನದರಿ ಪ್ರವಾಸದಲ್ಲಿ ಮುಖ್ಯಮಂತ್ರಿಯವರ ಜೊತೆ ಯಾರ್ಯಾರು ಪ್ರವಾಸ ಮಾಡಿದ್ದಾರೆ ಎಂಬ ಪ್ರಶ್ನೆಗೆ, ಶ್ರೀಮಾನ್ ಟಿ. ಶಾಮಣ್ಣನವರು ಎಂದು ಇದೆ. ಆದರೆ, ಜೂನ್ 21ನೇ ತಾರೀಕಿನ ಹಿಂದೂ ಪೇಪರಿನಲ್ಲಿ ಒಂದು ಫೊಟೊ ಬಂದಿದೆ. ಆದರಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರು ಮತ್ತು ಶ್ರೀಮತಿ ವೀರೇಂದ್ರ ಪಾಟೀಲರು ಜಪಾನಿನಲ್ಲಿ ಎಕ್ಸ್‌ಪೋ 70 ನೋಡಿ ಕಾರಿನಲ್ಲಿ ಪ್ರಯಾಣ ಮಾಡುತ್ತಿರುವುದು ಎಂದು ಬಂದಿದೆ.

ಶ್ರೀ ವೀರೇಂದ್ರ ಪಾಟೀಲ್.—ಮಾರ್ಮ್ಯ ಸದಸ್ಯರು ಪಿಕ್ಚರಿನಲ್ಲಿ ಏನು ಬಂದಿದೆ ಮತ್ತು ಅದರಲ್ಲಿ ಏನು ಬರದಿದ್ದಾರೆ ಎಂಬುದನ್ನು ಹೇಳಿದ್ದಾರೆ. ಆದರೆ ನಾನು ನನ್ನ ಶ್ರೀಮತಿಯನ್ನು ಕರಕೊಂಡು ಹೋಗಿಲ್ಲ. ಆದ್ದರಿಂದ ಪೇಪರಿನಲ್ಲಿ ಏನು ವರದಿ ಬಂದಿದೆ, ಅದು ಸರಿಯಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಮುಖ್ಯಮಂತ್ರಿಯವರು ಜಪಾನ್ ಸರ್ಕಾರದ ಆಹ್ವಾನದ ಮೇರೆ ಈ ಪ್ರವಾಸವನ್ನು ಮಾಡಿದ್ದಾರೆಂದು ಹೇಳಿದರು. ಆದರೆ, ಪೇಪರಿನಲ್ಲಿ ಜಪಾನ್ ಸರ್ಕಾರದವರು ಮುಖ್ಯಮಂತ್ರಿಯವರನ್ನು ಆಹ್ವಾನಿಸಿಲ್ಲ ಎಂದು ವರದಿಯಾಗಿದೆ. ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ?

ಶ್ರೀ ವೀರೇಂದ್ರ ಪಾಟೀಲ್.—ಪತ್ರಿಕೆಗಳಲ್ಲಿ ಏನು ವರದಿಯಾಗಿದೆ. ಅದಕ್ಕೆ ನಾನು ಜವಾಬ್ದಾರನಲ್ಲ. ಯಾರಿಂದ ನನಗೆ ಇನ್‌ವಿಟೇಶನ್ ಬಂದಿದೆ ಅದು ಸರಿಯಾದ ವಿಚಾರ.

Sri K. H. RANGANATH.—Were you invited by the Government of Japan?

Sri VEERENDRA PATIL.—I have already said from whom I had an invitation.

Retention and Transfers of Assistant Engineers, Supervisors and other Staff of P. W. D.

36. Sri MAHADEV G. BANAKAR (Byadagi).—

Will the Minister for Public Works be pleased to state :—

(*a*) the period up to which the Supervisors, Junior Engineers and Assistant Engineers serving in the Public Works Department can continue in the sams sub-division or circle ;

(*b*) whether the Government is following any rule in regard to their transfers ;

(*c*) since how long the P. W. D. Supervisors, Junior Engineers and Assistant Engineers are serving in the same sub-division and circle in Dharwar circle ;

(*d*) whether the Government have taken any action against those who are serving in the same sub-division or circle in Dharwar circle for a longer period violating the rule in respect of trnsfers followed by the Government ;

(*e*) if not, the reason for the same ?